ಆ) ಆನೆಗಳ ಸಂತತಿಯನ್ನು ರಕ್ಷಿಸಲು ಹಲವಾರು ಪ್ರತಿಬಂಧಕ ಕ್ರಮಗಳನ್ನು ಕೈಗೊಳ್ಳಲಾಗಿದೆ; ತುರ್ತು ಸಂದೇಶಕ್ಕಾಗಿ ಇಲಾಖೆಯಲ್ಲಿ ೩೫ ವಾಕಿ ಟಾಕಿ ಉಪಕರಣಗಳನ್ನು ಕೊಡಲಾಗಿದೆ. ಪ್ರಭಾವ ಶಾಲಿಯಾದಂತ ಆಯುಧಗಳನ್ನು ಕೊಡಲಾಗಿದೆ. ಹಾಗೂ ೫ ವರ್ಷಗಳ ವ್ಯಾಪ್ತಿಗೆ ೩.೮೩ ಕೋಟಿ ರೂ.ಗಳ ಒಂದು ಕಾರ್ಯಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಆರ್ಥಿಕ ನೆರವಿಗಾಗಿ ಮಂಡಿಸಲಾಗಿದೆ. ಇದರಲ್ಲಿ ರೂ. ೧೨.೦೦ ಲಕ್ಷಗಳನ್ನು ೧೯೮೬-೮೭ನೇ ಸಾಲಿಗೆ ಮಂಜೂರು ಮಾಡಿದ್ದು ಪ್ರಸ್ತುತ ಸಾಲಿಗೆ ೧೦.೫೦ ಲಕ್ಷ ರೂ.ಗಳನ್ನು ನಿಗದಿಪಡಿಸಿರುತ್ತಾರೆ. ಕಳೆದ ವರ್ಷ ನಾಲ್ಕು ಜೀಪುಗಳನ್ನು ಇಲಾಖೆ ಬಳಕೆಗೆ ಕೊಡಲಾಗಿದೆ. ಹಾಗೂ ಈ ಸಾಲಿಗೆ ೪೦ ನಿಸ್ತಂತು ಉಪಕರಣಗಳು ಹಾಗೂ ೮೦ ತುಪಾಕಿ, ಹಾಗೂ ೫ ಜೀಪುಗಳನ್ನು ಖರೀದಿಸಲು ಸೂಕ್ತ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ನೆರೆಯ ರಾಜ್ಯಗಳೊಂದಿಗೆ ಸಮಾಲೋಚಿಸಿ ಆನೆ ಹತ್ಯೆಯನ್ನು ತಡೆಗಟ್ಟುವ ತಂಡವನ್ನು ರಚಿಸುವ ವಿಚಾರವು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಜಿ. ರಾಜುಗೌಡ.—ಆನೆಗಳ ಸಂತತಿ ಹೆಚ್ಚಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ಎಂಬುದು ನನ್ನ ಪ್ರಶ್ನೆ ಇದೆ. ಆದರೆ ಮಾನ್ಯ ಮಂತ್ರಿಗಳು ಆನೆಗಳ ಸಂತತಿಯನ್ನು ರಕ್ಷಿಸಲಿಕ್ಕೆ ಏನು ಮಾಡಿದ್ದೇವೆ ಎಂದು ಉತ್ತರ ಕೊಟ್ಟಿದ್ದಾರೆ. ಆನೆಗಳ ಹತ್ಯೆಯನ್ನು ತಡೆಗಟ್ಟಲು ಸರ್ಕಾರ ವಿಫಲ ವಾಗಿದೆ. ಕಳೆದ ದಶಕದಲ್ಲಿ ದಂತಕ್ಕೋಸ್ಕರ ಎಷ್ಟು ಆನೆಗಳನ್ನು ಕೊಲ್ಲಲಾಗಿದೆ ಎಂದು ದಯವಿಟ್ಟು ಹೇಳುತ್ತೀರಾ ?

ಶ್ರೀ ಜಿ.ಎಸ್. ಬಾಗಲಕೋಟ್.—ಸನ್ಮಾನ್ಯ ಅಧ್ಯಕ್ಷರೇ ಈ ಸರ್ಕಾರ ಕೈಗೊಂಡಿರುವ ಕ್ರಮಂ ಗಳಿಂದ ೧೯೮೫-೮೭ರಲ್ಲಿ ಸುಮಾರು ೨೫ ಪ್ರಕರಣಗಳು ಇದ್ದರೆ ಇಲ್ಲಿಯವರೆಗೆ ಬಂದ ಮಾಹಿತಿಗಳ ಪ್ರಕಾರ ಕೇವಲ ಎರಡು ಆನೆಗಳ ಹತ್ಯೆಯಾಗಿದೆ.

ಶ್ರೀ ಜಿ. ರಾಜುಗೌಡ.—ಅರಣ್ಯಗಳಲ್ಲಿ ನಿರಾತಂಕವಾಗಿ ಆನೆಗಳನ್ನು ಬೇಟೆಯಾಡುವುದನ್ನು ತಪ್ಪಿಸಲಿಕ್ಕೆ ಸರ್ಕಾರ ಎಷ್ಟೇ ಕ್ರಮಗಳನ್ನು ಕೈಗೊಂಡರೂ ಕೂಡ ವಿಫಲವಾಗಿರುವುದನ್ನು ಮಾನ್ಯ ಸಚಿವರು ಒಪ್ಪಿಕೊಳ್ಳಬೇಕು. ನೈಸರ್ಗಿಕ ಅರಣ್ಯವನ್ನು ಕಾಪಾಡತಕ್ಕಂಥ ದೃಷ್ಟಿಯಿಂದ ಕೂಡ ಸರ್ಕಾರ ವಿಫಲವಾಗಿದೆ. ಈ ಎಲ್ಲಾ ಕಾರಣಗಳಿಂದ ಆನೆಗಳ ಸಂತತಿ ಕ್ಷೀಣಿಸುತ್ತಿರುವುದರಿಂದ ಈಗಿರತಕ್ಕಂಥ ಹೆಣ್ಣಾನೆಗಳಿಂದ ಸಂತತಿಯನ್ನು ಹೆಚ್ಚು ಮಾಡಲಿಕ್ಕೆ ಗಂಡಾನೆಗಳ ಸಂಖ್ಯೆ ಕಡಿಮೆ ಇದೆ. ಆದ್ದರಿಂದ ಹೊರಗಡೆಯಿಂದ ಗಂಡಾನೆಗಳನ್ನು ತರಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜಿ.ಎಸ್. ಬಾಗಲಕೋಟ್.—ಸನ್ಮಾನ್ಯ ಅಧ್ಯಕ್ಷರೇ, ೧೯೮೫ನೇ ಜನಗಣತಿಯ ಪ್ರಕಾರ ನಮ್ಮ ಅರಣ್ಯಗಳಲ್ಲಿ ಸುಮಾರು ೩೫೭ ಆನೆಗಳು ಇವೆ. ಇವುಗಳಲ್ಲಿ ೭೦ಕ್ಕಿ ಗಂಡಾನೆಗಳು ಇವೆ. ಆದ್ದರಿಂದ ಬೇರೆ ಕಡೆಯಿಂದ ಗಂಡಾನೆಗಳನ್ನು ತರಿಸುವುದು ಅವಶ್ಯಕತೆ ಇಲ್ಲ.

ಶ್ರೀ ವೇದಾಂತ ಹೆಮ್ಮಿಗೆ.—ಗಂಡಾನೆಗಳು ಎಲ್ಲಿ ಸಿಗುತ್ತವೆ ಎಂದು ಮಾನ್ಯ ರಾಜಗೌಡರು ಸಜೆಸ್ಟ್ ಮಾಡಬೇಕು.

ಶ್ರೀ ಬಿ. ರಾಜುಗೌಡ.—ಮಾನ್ಯ ಅಧ್ಯಕ್ಷರೇ.....

ಅಧ್ಯಕ್ಷರು.—ಸಾಕಷ್ಟು ಪ್ರಶ್ನೆ ಕೇಳಿದ್ದೀರಿ.

ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ಸಾಲ ಸೌಲಭ್ಯ ನೀಡುವ ಬಗ್ಗೆ

೧೩೧. ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಸಣ್ಣ ಕೈಗಾರಿಕೆಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸ್ವಯಂ ಉದ್ಯೋಗ ಯೋಜನೆಯಡಿಯಲ್ಲಿ ಸಾಲ ಸೌಲಭ್ಯವನ್ನು ಕೋರಿ ಸರ್ಕಾರಕ್ಕೆ ಅರ್ಜಿ ಬಂದಿರುವ ನಿರುದ್ಯೋಗಿ ಪದವೀಧರರ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿಗಳನ್ನು ಒದಗಿಸುವುದು).

ಆ) ಸದರಿ ಅರ್ಜಿಗಳಲ್ಲಿ ಎಷ್ಟು ಜನ ನಿರುದ್ಯೋಗಿಗಳಿಗೆ ಸರ್ಕಾರದವರು ಸಾಲವನ್ನು ನೀಡಿದ್ದಾರೆ ಹಾಗೂ ಅದರ ಒಟ್ಟು ಮೊತ್ತವೆಷ್ಟು ?

ಇ) ಸಾಲಸೌಲಭ್ಯವನ್ನು ಪಡೆದ ನಿರುದ್ಯೋಗಿಗಳು ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುತ್ತಿದ್ದಾರೆಯೇ ಎಂಬುದನ್ನು ತಿಳಿಯಲು ಸರ್ಕಾರದವರು ಆಗಾಗ್ಗೆ ತಪಾಸಣೆ ನಡೆಸುತ್ತಿದ್ದಾರೆಯೇ

ಈ) ಹಾಗಿಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು ?

ಶ್ರೀ ಬಿ. ಎ. ಜೀವಿಜಯ (ಸಣ್ಣ ಕೈಗಾರಿಕೆಗಳ ಸಚಿವರು):—

ಅ) ಸ್ವಯಂ ಉದ್ಯೋಗ ಯೋಜನೆಯಲ್ಲಿ ೧೯೮೩–೮೪ ರಿಂದ ೧೯೮೬–೮೭ರವರೆಗೆ ವಿದ್ಯಾವಂತ ನಿರುದ್ಯೋಗಿಗಳಿಂದ ಸ್ವೀಕರಿಸಿದ ಜಿಲ್ಲಾವಾರು ಅರ್ಜಿಗಳ ಸಂಖ್ಯೆ ಲಗತ್ತಿಸಿದೆ.

ಆ) ಸ್ವಯಂ ಉದ್ಯೋಗ ಯೋಜನೆಯಲ್ಲಿ ೧೯೮೩–೮೪ರಿಂದ ೧೯೮೬-೮೭ರವರೆಗೆ ಮಂಜೂರಾತಿಯಾದ ಸಂಖ್ಯೆ :

ವರ್ಷ	ಫಲಾನುಭವಿಗಳ ಸಂಖ್ಯೆ	ಪಡೆದ ಸಾಲ (ಲಕ್ಷ ರೂ.ಗಳಲ್ಲಿ)
೧	೨	೩
೧೯೮೩–೮೪	೧೨೩೦೭	೧೯೨೦–೦೦
೧೯೮೪–೮೫	೧೨೮೧೦	೨೩೭೯–೦೦
೧೯೮೫–೮೬	೧೨೮೩೭	೨೫೦೬–೫೦
೧೯೮೬–೮೭	೧೨೧೦೦	೨೩೯೫–೦೦
ಒಟ್ಟು	೫೦೦೫೪	೯೨೪೦–೫೦

೧೯೮೩–೮೪ನೇ ಸಾಲಿನ ಪೂರ್ಣ ವರದಿಯು ಜಿಲ್ಲೆಗಳಿಂದ ಇನ್ನೂ ಬಂದಿಲ್ಲ.

ಇ) ಸಾಲ ಸೌಲಭ್ಯ ಪಡೆದ ನಿರುದ್ಯೋಗಿಗಳು ಸರಿಯಾಗಿ ಸಾಲವನ್ನು ಉಪಯೋಗಿಸಿರುವುದನ್ನು ಕಂಡರಿತು ಜಿಲ್ಲಾವಾರು ವಹಿವಾಟಿನ ಕೆಲಸವನ್ನು ವಿಶ್ವವಿದ್ಯಾನಿಲಯ ಹಾಗೂ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ನಿಗಮಗಳಿಗೆ ವಹಿಸಲಾಗಿದೆ. ಅವುಗಳ ವರದಿಯನ್ನು ನಿರೀಕ್ಷಿಸಲಾಗಿದೆ.

ಈ) ಉದ್ಭವಿಸುವುದಿಲ್ಲ.

ANNEXURE

STATEMENT OF APPLICATION RECEIUED UNDER SELF EMPLOYMENT PROGRAMME FROM 1983-84 to 1986-87 DISTRICTWISE

Sl. No.	District	1983-84	1984-85	1985-86	1986-87
1	2	3	4	5	6
1	Bangalore	6532	Ap-proximately	4407	1952
2	Bangalore (U	-	60,000	-	3097
3	Belgaum	4497	applications	3751	4748
4	Bellary	4620	have been	3124	3498
5	Bidar	2289	received from	1084	1781
6	Bijapur	3384	all	2782	3145
7	Chickmagalur	2228	Districts	1642	1215
8	Chitradurga	2515		2026	2240
9	Dakshina Kannada	4200		6291	3112
10	Dharwad	10758		53100	5939
11	Gulbarga	7829		3269	4643
12	Hassan	1356		1718	1518
13	Madikeri	342		416	476
14	Kolar	3126		2282	3229
15	Mandya	2679		2534	1823
16	Mysore	4920		5097	5266
17	Raichur	5386		3549	4397
18	Shimoga	7085		3033	4275
19	Tumkur	5684		3082	3959
20	Uttara Kannada	3092		1636	2555
	Total	82522		57003	62871

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧ್ಯಕ್ಷರೇ, ಇದೇನು ಇಲ್ಲಿ ಸಿನೆಮಾ ಶೂಟಿಂಗ್ ನಡೆದಿದೆಯೋ ?

ಅಧ್ಯಕ್ಷರು.—ಡಾಕ್ಯುಮೆಂಟರಿ ಫಿಲಂ ಮಾಡಿಸುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಐದು ವರ್ಷಗಳಲ್ಲಿ ಆಗಿರುವುದನ್ನು ತೋರಿಸಲಿಕ್ಕೇನು ? ಇನ್ನು ಮೇಲೆ ನಾವು ಮತ್ತೆ ಬರುವುದಿಲ್ಲ ವೆಂದು ಡಾಕ್ಯುಮೆಂಟರಿ ಫಿಲ್ಮ್‌ನ್ನು ಹಿಡಿಸಿಕೊಳ್ಳುತ್ತಿದ್ದಾರಾ?

ಅಧ್ಯಕ್ಷರು.— ಇಡೀ ಇಂಡಿಯಾದಲ್ಲಿ ಐಡೀಯಲ್ ಅಸೆಂಬ್ಲಿ ಇದು ಎಂದು ಡಾಕ್ಯುಮೆಂಟರಿ ಫಿಲಮ್ ಮಾಡಿಸುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಐಡಿಯಲ್ ಯಾರು ?

ಅಧ್ಯಕ್ಷರು.—ಆ ಕಡೆಯವರೂ ಐಡಿಯಲ್ ಇದ್ದಾರೆ, ಈ ಕಡೆಯವರೂ ಐಡಿಯಲ್ ಇದ್ದಾರೆ, ಈಗ ನೀವು ಶ್ರೀಮತಿ ನಾಗರತ್ನಮ್ಮ ನವರ ಪರವಾಗಿ ಪ್ರಶ್ನೆ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಶ್ರೀಮತಿ ಕೆ. ಎಸ್. ನಾಗರತ್ನಮ್ಮ ಅವರ ಪರವಾಗಿ).— ಅಧ್ಯಕ್ಷರೇ, ಸ್ವಯಂ ಉದ್ಯೋಗ ಯೋಜನೆಯಂ ಕೆಳಗೆ ವಿದ್ಯಾವಂತ ನಿರುದ್ಯೋಗಿಗಳಿಂದ ೮೬-೮೭ರಲ್ಲಿ ಸಂಮಾರು ೮೨,೮೭೧ ಅರ್ಜಿಗಳಂ ಬಂದಿವೆಯೆಂದು ಹೇಳಿದ್ದಾರೆ. ಮತ್ತು ೮೩-೮೪ರಲ್ಲಿ ೮೨,೫೨೨ ಎಂದು ಹೇಳಿದ್ದಾರೆ.

೧೧-೩೦ ಎ.ಎಂ,

೧೯೮೪-೮೫ರಲ್ಲಿ ಅಪ್ಲಾಕ್ಸಿಮೇಟಾಗಿ ೬೦ ಸಾವಿರ ಎಂದು ಹೇಳಿದ್ದೀರಿ. ೧೯೮೫-೮೬ರಲ್ಲಿ ೫೭ಸಾವಿರ ಎಂದು ಹೇಳಿದ್ದೀರಿ. ಇದರಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಕ್ಕೆ ಸೇರಿದವರು ಎಷ್ಟು ಮಂದಿ ಇದ್ದಾರೆ ? ಮಹಿಳೆಯರು ಎಷ್ಟು ಮಂದಿ ಇದ್ದಾರೆ ಎನ್ನುತಕ್ಕಂಥ ವಿವರ ಕೊಡಬೇಕು. ೨ನೆಯದಾಗಿ, ಸಂಮಾರು ೯,೨೪೦ ಲಕ್ಷ ರೂಪಾಯಿಗಳನ್ನು ಡಿಸ್ಟ್ರಿಬ್ಯೂಟ್ ಮಾಡಿದ್ದೇವೆಂದು ಹೇಳಿದ್ದೀರಿ. ಇದನ್ನು ಸರಿಯಾಗಿ ಉಪಯೋಗ ಮಾಡಿಕೊಂಡಿದ್ದಾರೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಮತ್ತು ಬೆಂಗಳೂರು ಯೂನಿವರ್ಸಿಟಿಯವರಿಗೆ ಪಹಿಸಿ, ವಿಚಾರಣೆ ಮಾಡಿಸಿ ಎಷ್ಟರಮಟ್ಟಿಗೆ ಇದು ಸದುಪಯೋಗವಾಗಿದೆ ಎಂಬ ವರದಿಯನ್ನು ತರಿಸುತ್ತೇವೆಂದೂ ಹೇಳಿದ್ದೀರಿ. ಈವರೆಗೆ ಇವರಿಂದ ವರದಿಯನ್ನು ಏನಾದರೂ ತರಿಸಿದ್ದೀರಾ? ಇದರ ಬಗ್ಗೆ ಅಧ್ಯಯನ ನಡೆದಿದೆಯೇ, ಎಷ್ಟು ಜನರು ಪ್ರಯೋಜನ ಪಡೆದುಕೊಂಡಿದ್ದಾರೆ ಎಂಬುದನ್ನು ತಾವು ಹೇಳುತ್ತೀರಾ ?

ಶ್ರೀ ಬಿ. ಎ. ಜೀವಿಜಯ.— ಅಧ್ಯಕ್ಷರೇ, ಪರಿಶಿಷ್ಟ ಜನಾಂಗಕ್ಕೆ ಶೇಕಡ ೩೦ರಷ್ಟು ಮೀಸಲಾತಿ ಇದೆ. ಉಪಯೋಗ ಮಾಡಿಕೊಂಡಿರುವವರ ನಿಖರವಾದ ಅಂಕಿಅಂಶ ಇಲ್ಲ. ಮಹಿಳೆಯರ ಬಗ್ಗೆ ಈಗಾಗಲೇ ವೇದಾಂತ ಹೆಮ್ಮಿಗೆ ಅವರಿಗೆ ಉತ್ತರ ಕೊಡುತ್ತಾ ಹೇಳಿದ್ದೇನೆ. ನಮಗೆ ಇನ್ನು ವಿಶ್ವವಿದ್ಯಾನಿಲಯ ಮತ್ತು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಿಂದ ವರದಿ ಬಂದಿಲ್ಲ. ಆ ವರದಿ ಬಂದಕೂಡಲೇ ತಮಗೆ ತಿಳಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾವು ಕೇಳುವ ಉದ್ದೇಶ ಇಷ್ಟೆ. ಇದು ಶ್ರೀಮತಿ ನಾಗರತ್ನಮ್ಮನವರ ಪ್ರಶ್ನೆ. ಅವರು ಯಾವಾಗಲೂ ಪ್ರಶ್ನೆ ಕೇಳುವುದಿಲ್ಲ. ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗದವರ ಅಂಕಿಅಂಶ ಇಲ್ಲ ಎಂದು ಹೇಳಿದರೆ ಹೇಗೆ ? ನೀವು ಇವರಿಗಾಗಿ ೧೮ ಪರ್ಸೆಂಟ್ ೨೦ ಪರ್ಸೆಂಟ್ ರಿಸರ್ವೇಷನ್ ಇಡುತ್ತೀರಿ. ಇಷ್ಟೊಂದು ಹಣ ಖರ್ಚು ಮಾಡಿದ್ದೀರಿ, ಎಷ್ಟು ಜನರಿಗೆ ಇದರಿಂದ ಸಹಾಯ ಸಿಕ್ಕಿದೆ ಎಂಬ ಮಾಹಿತಿಯನ್ನೂ ಹೇಳಬೇಕು.

ಶ್ರೀ ಬಿ. ಎ. ಜೀವಿಜಯ.—ಈಗಾಗಲೇ ೩೦ರಷ್ಟು ಮೀಸಲಾತಿ ಈ ಜನಾಂಗಕ್ಕೆ ಇದೆ. ಇದನ್ನು ಹೆಚ್ಚು ಕಡಿಮೆ ಕೊಡುತ್ತಾ ಬಂದಿದ್ದೇವೆ. ಮಹಿಳೆಯರ ಬಗ್ಗೆ ಅಂಕಿ ಅಂಶ ಕೇಳಿದ್ದೀರಿ. ನಮಗೆ ಅದರಿಂದ ವರದಿ ಬಂದಿಲ್ಲ. ಬಂದಕೂಡಲೇ ತಮಗೆ ಕಳುಹಿಸಿಕೊಡುತ್ತೇನೆ.

ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುತ್ ಪೂರೈಕೆಯ ಬಗ್ಗೆ

ಶ್ರೀ ಕೆ. ಪಿ. ಮಗಣ್ಣನವರ್ (ಸಡಲಗಾ).— ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಮಿಟ್ಟು ಉತ್ತರಿಸುವರೇ ?

ಅ) ಪ್ರತಿವರ್ಷ ಫೆಬ್ರುವರಿ ತಿಂಗಳಿನ ಒಂದನೇ ವಾರದಿಂದ ಜೂನ್ ತಿಂಗಳಿನ ಕೊನೆಯವಾರದ ವರೆಗೆ ಕೃಷ್ಣಾ ದೂಧಗಂಗಾ ನದಿಗಳ ದಡದಲ್ಲಿರುವ ಖಾಸಗೀ ನೀರಾವರಿ ಪಂಪುಸಟ್ಟುಗಳಿಗೆ ವಿದ್ಯುತ್ ಪೂರೈಕೆ ಮಾಡಬಾರದೆಂದು ಸರ್ಕಾರವು ಆದೇಶ ಹೊರಡಿಸಿರುವುದು ನಿಜವೇ ?

ಆ) ಇದರಿಂದ ರೈತರಿಗೆ ಅನಾನುಕೂಲವಾಗುವುದೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಈ ಬಗ್ಗೆ ತೆಗೆದುಕೊಂಡ ಕ್ರಮವೇನು ?

ಶ್ರೀ ಜೆ. ಹೆಚ್. ಪಟೀಲ್ (ಕೈಗಾರಿಕೆ ಮತ್ತು ವಿದ್ಯುತ್ ಸಚಿವರು).—

ಅ) ಅನೇಕ ಗ್ರಾಮಗಳು ಮತ್ತು ನಗರಗಳು ಮತ್ತೂ ದೊಡ್ಡ ಪಟ್ಟಣಗಳೂ ಸಹ ಬೇಸಿಗೆಯಲ್ಲಿ ಕುಡಿಯುವ ನೀರಿನ ಅಭಾವಕ್ಕೆ ಒಳಗಾಗಿದ್ದುದರಿಂದ ರಾಜ್ಯ ಮಟ್ಟದ ಸಣ್ಣ ನೀರಾವರಿ ಸಮನ್ವಯ